ವರದಿಯಾಗಿವೆ. 1992-93 ರಿಂದ 1995-96 ನೇ ಸಾಲಿನ ವರೆವಿಗೆ ಪರೀಕ್ಷಿಸಿದ ಪ್ರಕರಣಗಳು, ಖಚಿತಪಟ್ಟಿದ್ದು ಮತ್ತು ಸಾವಿನ ಸಂಖ್ಯೆ ಈ ಕೆಳಕಂಡಂತೆ ಇವೆ :

ವರ್ಷಗಳು	ರಕ್ತಮಾದರಿ ಪರೀಕ್ಷಿಸಿದ್ದು	ಏಡ್ಸ್ ಸೋಂಕು ತಗುಲಿರುವುದು (ಹೆಚ್ಐವಿ)	ಏಡ್ಸ್ ರೋಗ ಖಚಿತ ಪಟ್ಟಿದ್ದು	ಏಡ್ಸ್ ನಿಂದ ಸಾವು
1992	102336	168	2	2
1993	76237	868	9	9
1994	24209	425	15	13
1995	11583	439	12	12
1996ರ (ಜೂನ್ 1996ರ ಅಂತ್ಯದವರೆಗೆ)	3690	295	7	2

ಆ) ಲೈಂಗಿಕ ಸ್ವೇಚ್ಛಾಚಾರ ಕಾರಣದಿಂದ ಹೆಚ್ಚು ಪ್ರಕರಣಗಳು ಕಂಡು ಬಂದಿವೆ.

ಇ) ಏಡ್ಸ್ ರೋಗ ಹರಡುವುದನ್ನು ತಡೆಗಟ್ಟಲು ಭಾರತ ಸರ್ಕಾರದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ ಮಾರ್ಗ ಸೂಚಿಯಂತೆ ರಾಜ್ಯದಲ್ಲಿ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಏಡ್ಸ್ ರೋಗ ನಿಯಂತ್ರಣಕ್ಕಾಗಿ 3 (ಮೂರು) ಏಡ್ಸ್ ಸಮಿಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಹೆಚ್.ಐ.ವಿ. ಸೋಂಕಿನ ಪತ್ತೆಗೆ ಪರೀಕ್ಷೆ ಹಾಗೂ ಸೋಂಕಿನ ಪರಿಮಾಣವನ್ನು ತಿಳಿಯಲು ಸಮಿಕ್ಷೆಗಳನ್ನು ನಡೆಸಲಾಗುತ್ತಿದೆ. ರಕ್ತ ಸುರಕ್ಷತೆಗಾಗಿ (10) ಹತ್ತು ವಲಯ ರಕ್ತ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ರಕ್ತನಿಧಿ ಕೇಂದ್ರಗಳನ್ನು ಏಡ್ಸ್ ಸೋಂಕು ಪರೀಕ್ಷೆಗಾಗಿ ವಲಯ ರಕ್ತ ತಪಾಸಣಾ ಕೇಂದ್ರಕ್ಕೆ ಜೋಡಣೆ ಮಾಡಲಾಗಿದೆ. ರಾಜ್ಯದಲ್ಲಿರುವ ಒಟ್ಟು 42 ರಕ್ತನಿಧಿ ಕೇಂದ್ರಗಳನ್ನು ಹಂತ ಹಂತವಾಗಿ ಆಧುನೀಕರಿಸಲಾಗುತ್ತಿದೆ. ಜಿಲ್ಲಾ ಮಟ್ಟದ ರಕ್ತ ನಿಧಿ ಕೇಂದ್ರಗಳಿಗೆ ತುರ್ತು ಪರಿಸ್ಥಿತಿಯಲ್ಲಿ ರಕ್ತ ಸುರಕ್ಷತೆಗಾಗಿ ಪರೀಕ್ಷೆಗೆ ಹೆಚ್.ಐ.ವಿ. ರ್ಯಾಪಿಡ್ ಟಿಸ್ಟ್ ಕಿಟ್‌ಗಳನ್ನು ಒದಗಿಸಲಾಗಿದೆ. ರಾಜ್ಯದಲ್ಲಿ ಹಿರಿಯ ಆಸ್ಪತ್ರೆಗಳ, ಜಿಲ್ಲಾ ಆಸ್ಪತ್ರೆಗಳ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಒಟ್ಟು 24 ಲೈಂಗಿಕ ಚಿಕಿತ್ಸಾಲಯಗಳನ್ನು ಬಲವರ್ಧನೆ ಮಾಡಲಾಗಿದೆ ಮತ್ತು ಚಿಕಿತ್ಸೆಯ ಜೊತೆಗೆ ಸುರಕ್ಷಿತ ಲೈಂಗಿಕತೆ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ.

ಏಡ್ಸ್ ನಿಯಂತ್ರಣದ ಬಗ್ಗೆ ಮಾಹಿತಿ ನೀಡಲು ಸಮೂಹ ಮಾಧ್ಯಮ ಸಂಪರ್ಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ಆಸ್ಪತ್ರೆಗಳಲ್ಲಿ ಸಮರ್ಪಕವಾಗಿ ಸಂಸ್ಕರಣೆ ಮಾಡಿದ ಸೂಜಿ, ಸಿರಿಂಜ್‌ಗಳನ್ನು ಮತ್ತು ಉಪಕರಣಗಳನ್ನು ಬಳಸಲು ಸೂಚಿಸಲಾಗಿದೆ.

ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ ಕುರಿತು.

2284-ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳೆಷ್ಟು? ಎಷ್ಟು ಖಾಲಿ ಇವೆ. (ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಹುದ್ದೆಗಳನ್ನು ಯಾವ್ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುವುದು?

ಇ) ಪ್ರೌಢ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡುವಾಗ 29 ವಯೋಮಿತಿ ಆದವರಿಗೆ ಪ್ರಾಥಮಿಕ ಶಾಲೆಗಳಲ್ಲಿ ಆಯ್ಕೆ ಮಾಡಿಕೊಂಡಂತೆ ಇವರಿಗೂ ಆದೇ ಮಾನದಂಡವನ್ನು ಅನುಸರಿಸಲಾಗುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಹುದ್ದೆಗಳ ಸಂಖ್ಯೆ : 1) ಪ್ರೌಢ - 19375
2) ಪ್ರಾಥಮಿಕ - 130788

ಖಾಲಿ ಹುದ್ದೆಗಳು : 1) ಪ್ರೌಢ - 2500
2) ಪ್ರಾಥಮಿಕ - 18650
(ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ಮೀಸಲಾತಿ ನಿಯಮ ಮತ್ತು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಇ) ಇಲ್ಲ

ಅನುಬಂಧ
ಜಿಲ್ಲಾವಾರು ವಿವರ

ಜಿಲ್ಲೆಯ	ಹೆಸರು	ಪ್ರೌಢಶಾಲೆ	ಪ್ರಾಥಮಿಕ ಶಾಲೆ
1.	ಗುಲ್ಬರ್ಗಾ	328	1133
2.	ಬೀದರ್	142	814
3.	ಬಳ್ಳಾರಿ	21	836
4.	ರಾಯಚೂರು	148	1202
5.	ಬೆಂಗಳೂರು ಉತ್ತರ	12	37
6.	ಬೆಂಗಳೂರು ದಕ್ಷಿಣ	58	169
7.	ಬೆಂಗಳೂರು ಗ್ರಾಮಾಂತರ	162	1351
8.	ಚಿತ್ರದುರ್ಗ	52	840
9.	ಕೋಲಾರ	214	923
10.	ಶಿವಮೊಗ್ಗ	92	714
11.	ತುಮಕೂರು	113	852
12.	ಬೆಳಗಾಂ	194	1578

13.	ಬಿಜಾಪುರ	63	980
14.	ಕಾರವಾರ	54	881
15.	ಧಾರವಾಡ	178	1523
16.	ಮೈಸೂರು	89	1156
17.	ಮಂಡ್ಯ	99	990
18.	ಹಾಸನ	113	895
19.	ಚಿಕ್ಕಮಗಳೂರು	76	523
20.	ದಕ್ಷಿಣ ಕನ್ನಡ	206	976
21.	ಕೊಡಗು	86	277
	ಒಟ್ಟು	2500	18650

ತುಮಕೂರು ಜಿಲ್ಲೆಯಲ್ಲಿ ಉದ್ಯೋಗ ಭರವಸೆ ಯೋಜನೆ.

2526 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಗೆ 1995-96ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು.

ಆ) 1995-96ನೇ ಸಾಲಿನಲ್ಲಿ ಇದಕ್ಕಾಗಿ ತಾಲ್ಲೂಕುವಾರು ಬಿಡುಗಡೆಯಾದ ಹಣವೆಷ್ಟು.

ಇ) ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ರೂ. 825 ಲಕ್ಷಗಳ ಅನುದಾನ ಬಿಡುಗಡೆ ಮಾಡಿರುತ್ತದೆ.

ಆ) ತಾಲ್ಲೂಕುವಾರು ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆಯಾದ ಹಣ	ಖರ್ಚಾದ ಹಣ (ಆರಂಭದ ಶಿಲ್ಕು ಸೇರಿಸಿ)
1.	ಕೊರಟಗೆರೆ	75.00	78.903
2.	ಮಧುಗಿರಿ	100.00	100.492
3.	ಪಾವಗಡ	75.00	81.730